ಈ) ಯಾವಾಗ ಅದಕ್ಕೆ ಸ್ವಂತ ಕಟ್ಟಡ ಒದಗಿಸಲಾಗುವುದು?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಮತ್ತು ಕಂದಾಯ ಸಚಿವರು) :

ಅ) ಇಲ್ಲಿರುವ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದೆ.

ಆ) ಹೌದು. ಸರ್ವೆ ನಂಬರ್ 218-2ರಲ್ಲಿ ಒಂದು ಎಕರೆ ಜಮೀನನ್ನು ಇಲಾಖೆಯ ಸ್ವಾಧೀನಕ್ಕೆ ಪಡೆಯಲಾಗಿದೆ.

ಇ) ಸದರಿ ಸ್ಥಳದಲ್ಲಿ ಕಟ್ಟಲು ಉದ್ದೇಶಿಸಿರುವ ಕಟ್ಟಡದ ನಕ್ಷೆ ಮತ್ತು ಅಂದಾಜು ವೆಚ್ಚ ಈಗಾಗಲೇ ಸಿದ್ಧವಾಗಿದ್ದು, ತಾಂತ್ರಿಕ ಅನುಮೋದನೆ ಪಡೆಯಲಾಗುತ್ತಿದೆ.

ಈ) ಈ ಬಗ್ಗೆ 1994-95ನೇ ಶೈಕ್ಷಣಿಕ ವರ್ಷದಲ್ಲಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

ಮೂಡಬಿದ್ರೆ ಮತ್ತು ಮುಲ್ಕಿಯಲ್ಲಿ ಬಾಲಕಿಯರ ವಿದ್ಯಾರ್ಥಿನಿಲಯಗಳು

566-ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ) : ಮಾನ್ಯ ಸಮಾಜ ಕಲ್ಯಾಣ ಮತ್ತು ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೂಡಬಿದ್ರೆ ಮತ್ತು ಮುಲ್ಕಿಯಲ್ಲಿ ತೆರೆಯಬೇಕೆಂದಿರುವ ವಿದ್ಯಾರ್ಥಿನಿನಿಲಯದ ನಿರ್ಧಾರ ಯಾವ ಹಂತದಲ್ಲಿದೆ.

ಆ) ಸಾಕಷ್ಟು ವಿದ್ಯಾ ಸಂಸ್ಥೆಗಳನ್ನು ಹೊಂದಿರುವ ಆ ನಗರದಲ್ಲಿ ವಿದ್ಯಾರ್ಥಿನಿಯರಿಗೆ ಆಗುವ ತೊಂದರೆಯನ್ನು ಸರ್ಕಾರ ಪರಿಶೀಲಿಸಿದೆಯೇ?

ಇ) ಸರ್ಕಾರ ಯಾವಾಗ ಅಲ್ಲಿ ವಿದ್ಯಾರ್ಥಿನಿ ನಿಲಯ ತೆರೆಯುವುದು?

ಈ) ಅಲ್ಲಿ ವಿದ್ಯಾರ್ಥಿನಿ ನಿಲಯ ತೆರೆಯಲು ಸರ್ಕಾರಕ್ಕೆ ಇರುವ ತೊಂದರೆಯೇನು?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಮತ್ತು ಕಂದಾಯ ಸಚಿವರು):

ಅ) ಪರಿಶೀಲನೆಯಲ್ಲಿದೆ

ಆ) ಹೌದು

ಸರ್ಕಾರಕ್ಕೆ ಯಾವ ತೊಂದರೆಯೂ ಇಲ್ಲ, ಸಂಪನ್ಮೂಲಗಳನ್ನು ಮತ್ತು ಆದ್ಯತೆಯನ್ನು ಗಮನದಲ್ಲಿಟ್ಟುಕೊಂಡು ಈ ಸ್ಥಳದಲ್ಲಿ ವಿದ್ಯಾರ್ಥಿನಿಲಯಗಳನ್ನು ತೆರೆಯಲು ಕಾರ್ಯಕ್ರಮ ಕೈಗೊಳ್ಳಲಾಗುವುದು.

ಭೂ ಸುಧಾರಣೆಯಲ್ಲಿ ಬಾಕಿ ಇರುವ ವಿವಾದಗಳು

567-ಕೆ.ಸೋಮಪ್ಪ ಸುವರ್ಣ (ಮೂಡಬಿದಿರೆ): ಮಾನ್ಯ ಕಂದಾಯ ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂ ಸುಧಾರಣೆಯ ಎಷ್ಟು ಕೇಸುಗಳು ಇತ್ಯರ್ಥವಾಗದೆ ಬಾಕಿ ಉಳಿದಿರುತ್ತವೆ?

ಆ) ಕಳೆದ 20 ವರ್ಷಗಳಿಂದ ತೊಂದರೆ ಅನುಭವಿಸುತ್ತಿರುವ ಆ ಗೇಣಿದಾರರ ರಕ್ಷಣೆಗೆ ಸರ್ಕಾರ ಏನು ಕ್ರಮ ಕೈಕೊಂಡಿದೆ?

ಇ) ನ್ಯಾಯಾಲಯದ ಹಂತದಲ್ಲಿ ತೀರ್ಮಾನವಾಗುವಲ್ಲಿ ತಡವಾಗುತ್ತಿರುವುದರಿಂದ ಸರ್ಕಾರ ಶೀಘ್ರ ನ್ಯಾಯ ಒದಗಿಸಲು ಏನು ಕ್ರಮ ಕೈಗೊಳ್ಳುವುದು?

ಈ) ಇನ್ನೆಷ್ಟು ಸಮಯದೊಳಗೆ ಆ ಕೇಸುಗಳ ತೀರ್ಮಾನವನ್ನು ಮಾಡಲಾಗುವುದು?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಮತ್ತು ಕಂದಾಯ ಸಚಿವರು):

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂಸುಧಾರಣೆಯಡಿ ಒಟ್ಟು 3301 ಪ್ರಕರಣಗಳು ಬಾಕಿ ಇರುತ್ತದೆ.

ಆ) ದಕ್ಷಿಣ ಕನ್ನಡ ಜಿಲ್ಲೆಗೆ ನಾಲ್ಕು ಅಧಿಕ ಭೂ ನ್ಯಾಯ ಮಂಡಲಿಗಳನ್ನು 1992ರಲ್ಲಿ ಮಂಜೂರು ಮಾಡಿರುತ್ತದೆ. ಎಲ್ಲಾ ಭೂ ನ್ಯಾಯ ಮಂಡಲಿಗಳಿಗೂ ಭೂ ಸುಧಾರಣಿ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ಗುರಿನಿಗಧಿಪಡಿಸಲಾಗಿದೆ. ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥ ಮಾಡುವ ಸಲುವಾಗಿ ಮುಂದಿನ ಸೂಕ್ತಕ್ರಮ ತೆಗೆದುಕೊಳ್ಳಲು ಅಡ್ವೋಕೇಟ್ ಜನರಲ್‌ರವರಿಗೆ ಈಗಾಗಲೇ ಪತ್ರ ಬರೆದಿರುತ್ತೆ. ಇದರ ಜತೆಗೆ ಪ್ರಕರಣಗಳ ಶೀಘ್ರ ವಿಲೇವಾರಿಗೆ ಸಹಾಯವಾಗಲು 'ವಿಶೇಷ ಟ್ರಿಬ್ಯೂನಲ್' Special Appellate Tribunal ರಚಿಸಲೂ ಸಹಾ ತೀರ್ಮಾನಿಸಿದ್ದು, ಈ ಸಂಬಂಧದ ವಿಧೇಯಕ ಸಹಾ ಸದನದಲ್ಲಿ ಈಗಾಗಲೇ ಮಂಡಿಸಲಾಗಿದೆ.

ಈ) ಮೇಲೆ ಹೇಳಿದಂತೆ, ಭೂ ನ್ಯಾಯ ಮಂಡಳಿಗಳಲ್ಲಿ ಬಾಕಿ ಇರುವ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ಗುರಿ ನಿಗಧಿಪಡಿಸಲಾಗಿದೆ. ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳನ್ನು ಶೀಘ್ರ ಇತ್ಯರ್ಥಗೊಳಿಸಲು ಅನುಕೂಲವಾಗುವಂತೆ ಮುಂದಿನ ಸೂಕ್ತಕ್ರಮ ತೆಗೆದು ಕೊಳ್ಳಲು ಅಕ್ವೋಕೇಟ್ ಜನರಲ್‌ರವರಿಗೆ ಈಗಾಗಲೇ ಪತ್ರ ಬರೆದಿರುತ್ತ. ಬಾಕಿ ಇರುವ ಪ್ರಕರಣಗಳನ್ನು ಇಷ್ಟೇ ಕಾಲಮಿತಿಯಲ್ಲಿ ಇತ್ಯರ್ಥ ಮಾಡಲಾಗುತ್ತೆ ಎಂದು ಹೇಳುವುದು ಕಷ್ಟಕರವಾಗುತ್ತೆ. ಆದರೆ ಅವುಗಳ ಶೀಘ್ರ ವಿಲೆಗೆ ತೀವ್ರಕ್ರಮ ಜರುಗಿಸಲಾಗುತ್ತಿದೆ.

ಬೆಂಗಳೂರು ನಗರ ಜಿಲ್ಲೆಯಲ್ಲಿನ ನೋಟಿಫೈಡ್ ಏರಿಯಾಗಳ ಬಗ್ಗೆ

439-ಶ್ರೀ ಕೆ.ಲಕ್ಕಣ್ಣ (ರಾಜಾಜಿನಗರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರ ಜಿಲ್ಲೆಯಲ್ಲಿ ನೋಟಿಫೈಡ್ ಏರಿಯಾಗಳನ್ನು ಮಾಡಿರುವುದು ನಿಜವೇ?

ಆ) ಯಾವ ಯಾವ ಬಡಾವಣೆಗಳು ಈ ನೋಟಿಫೈಡ್ ಏರಿಯಾಕ್ಕೆ ಒಳಪಡುತ್ತವೆ?

ಇ) ಇದು ನಿಜವಾಗಿದ್ದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಾನೂನು ಪ್ರಕಾರ ಉಲ್ಲಂಘನೆಯಾಗುವುದಿಲ್ಲವೇ?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):

ಅ) ಹೌದು ಸಂವಿಧಾನದ (74ನೇ ತಿದ್ದುಪಡಿ) ಕಾಯ್ದೆ 1992ರನ್ವಯ ರಾಜ್ಯದ ಮುನ್ಸಿಪಲ್ ನಿಯಮಗಳಿಗೆ 31-5-94ರ ಒಳಗೆ ತಿದ್ದುಪಡಿ ಮಾಡಬೇಕಾಗಿದ್ದು, ಆವರೆವಿಗೆ ಈ ಅಧಿಸೂಚಿತ ಪ್ರದೇಶ ಸಮಿತಿಗಳನ್ನು ತಾತ್ಕಾಲಿಕವಾಗಿ ಸೃಜಿಸಲಾಗಿದೆ.

ಆ) ಅಧಿಸೂಚಿತ ಪ್ರದೇಶ ಸಮಿತಿಗಳಿಗೆ ತಾತ್ಕಾಲಿಕವಾಗಿ ಸೇರ್ಪಡೆಯಾಗಿರುವ ಬಡಾವಣೆಗಳು ಮತ್ತು ಹಳ್ಳಿಗಳ ವಿವರಗಳನ್ನು ಲಗತ್ತಿಸಲಾಗಿದೆ.

ಇ) ಇಲ್ಲ.

ಸಾರಕ್ಕಿ ಅಧಿಸೂಚಿತ ಪ್ರದೇಶ

ಗ್ರಾಮಗಳು : ಬಡಾವಣೆಗಳು

1. ಸಾರಕ್ಕಿ ಕೆರೆ
2. ಜೆ.ಪಿ. ನಗರ
3. ಪುಟ್ಟೇನಹಳ್ಳಿ